ಅರುಂಧತಿ ಸಣ್ಣಗೆ ತುಟಿ ಬಿರಿದು ನಕ್ಕು, "ರೆಡಿ ಡಾಕ್ಟರ್, ಸ್ವಲ್ಪ ಟೆನ್ಷನ್ ಆಯಿತು ಅಷ್ಟೇ" ಎಂದಳು. "ಇಟ್ಸ್ ಓಕೆ, ಐ ಕ್ಯಾನ್ ಅಂಡರ್‌ಸ್ಟ್ಯಾಂಡ್ ಯುವರ್ ಮೆಂಟಲ್ ಸ್ಟೇಟಸ್" ಎನ್ನುತ್ತ, "ಈ ಬಾರಿ ನಿಮಗೋಸ್ಕರ ಸ್ಪೆಷಲ್ ಜೆಲ್ ತರಿಸಿದ್ದೀನಿ. ಅದು ಸ್ಪರ್ಮ್ ಆಕ್ಟಿವ್ ಆಗಿ ಮೂವ್ ಮಾಡೋದಕ್ಕೆ ಹೆಲ್ಪ್ ಆಗತ್ತೆ. ಗೌತಮ್ ಹೇಳಿದ್ರು, ಎಷ್ಟು ಖರ್ಚಾದರೂ ಪರವಾಗಿಲ್ಲ ಅಂತ" ಎನ್ನುತ್ತ ಹುಬ್ಬು ಕುಣಿಸಿದರು. "ರಿಯಲಿ ಲಕ್ಕಿ ವುಮನ್ ಯು ಆರ್. ಎಷ್ಟು ಒಳ್ಳೆಯ ಹಸ್ಬೆಂಡ್, ನೀವು ಹಾಸಿಗೆಯಲ್ಲಿ ಸ್ವಲ್ಪನೂ ಕೋಆಪರೇಟ್ ಮಾಡದೇ ಇದ್ರೂ ಅವ್ರು ನಿಮ್ಮನ್ನ ಎಷ್ಟು ಚೆನ್ನಾಗಿ ನೋಡ್ಕೋತಾರೆ... ಇನ್ಯಾರಾದರೂ ಆಗಿದ್ರೆ ಇದೇ ಕಾರಣ ಇಟ್ಟುಕೊಂಡು ಬೇರೆ ಮದುವೆ ಮಾಡ್ಕೋತಿದ್ರು" ಎನ್ನುತ್ತ ತಲೆ ಸವರಿದರು. ಆ 'ಕೋಆಪರೇಟ್' ಅನ್ನುವ ಪದ ಅರುಂಧತಿಯ ಕಿವಿಯನ್ನು ನೂರಾರು ಅಲುಗಿನ ಚೂರುಗಳಾಗಿ ತಲುಪಿ ಇನ್ನಿಲ್ಲದಂತೆ ಹಿಂಡಲು ಶುರು ಮಾಡಿತು. ತಾನು ಎಷ್ಟು ಹೇಳಿದರೂ ಕೇಳದೆ, "ತಪ್ಪಾಯಿತು ಕ್ಷಮಿಸು, ಆರ್ಟಿಫಿಷಿಯಲ್ ಇನ್ಸೆಮಿನೇಷನ್ ಮಾಡಿಸಿಕೋ ಪ್ಲೀಸ್" ಎನ್ನುತ್ತ ಅವ ತನ್ನನ್ನು ಬಲವಂತ ಪಡಿಸಿದ್ದು ತನ್ನ ಪುರುಷತ್ವದ ಸಾಬೀತಿಗಾ? ಅಂದರೆ ಅವನಿಗೆ ಬೇಕಾದುದಾದರೂ ಏನು? ಎಂಬ ಪ್ರಶ್ನೆ ಏಳುತ್ತಿದ್ದಂತೆಯೇ ಕೋಪದಿಂದ ಅವಳ ಮುಖವೊಮ್ಮೆ ರಣ ರಣ ಬಿಸಿಲಿನಂತೆ ಪ್ರಜ್ವಲಿಸಿ ಭುವಿಯ ನೀರನ್ನೆಲ್ಲ ಇಂಗಿಸಿತು. ಸಣ್ಣ ತಿರಸ್ಕಾರವೊಂದು ಮೆಲ್ಲಗೆ ಎದ್ದಿತಾದರೂ ತೋರಗೊಡಲಿಲ್ಲ. ಸಿರೆಂಜು ಇನ್ನೇನು ಹೊರಗಿನ ಎಲ್ಲ ಜಂಜಡಗಳಿಂದ ಮುಕ್ತವಾಗಿ ಹೊಸ ಉಸಿರನ್ನು ತಳೆದು ಬರುವ ಸಲುವಾಗಿ ಅರುಂಧತಿಯ ಒಳಗನ್ನು ಪ್ರವೇಶಿಸಲು ಸಿದ್ಧವಾಗುತ್ತಿದ್ದಂತೆಯೇ ಆಕೆ ಮಲಗಿದ್ದಲ್ಲಿಂದ ದಢಕ್ಕನೆ ಎದ್ದು ಡಾಕ್ಟರರ ಕೈಯನ್ನು ಬಲವಾಗಿ ಹಿಡಿದುಕೊಂಡಳು. "ಬೀ ಕೂಲ್" ಡಾಕ್ಟರ್ ಹೇಳಿದ್ದನ್ನು ಕೇಳಿಸಿಕೊಳ್ಳದೆ, "ಇದು ಗೌತಮ್‌ನ ಸೀಮೆನ್ ತಾನೇ" ಎಂದಳು. "ಆಫ್ ಕೋರ್ಸ್, ಯಾಕಿಂತ ಅನುಮಾನ" ಎನ್ನುತ್ತ ಸ್ಪರ್ಮ್ ಕಲೆಕ್ಟರ್ ಕಪ್‌ನ ಮೇಲಿದ್ದ ನಂಬರ್ ತೋರಿಸಿದಳು. ಮತ್ತು ತಮ್ಮ ಆಸ್ಪತ್ರೆಯಲ್ಲಿ ಇಂತಹ ಅನುಮಾನಗಳನ್ನು ಇಟ್ಟುಕೊಳ್ಳಲೇ ಬೇಕಾಗಿಲ್ಲ ಎನ್ನುವಂತೆ ಅದಕ್ಕೆ ಸಂಬಂಧಿಸಿದ ರಿಜಿಸ್ಟರ್ ಅನ್ನು ತರುವಂತೆ ನರ್ಸನ್ನು ಅಟ್ಟಿ ಅರುಂಧತಿಯನ್ನು ಒಂದು ರೀತಿಯ ಉರಿಗಣ್ಣಿನಲ್ಲಿ ಸಣ್ಣಗೆ ನೋಡತೊಡಗಿದಳು. ಅವಳ ಮುಖಭಾವ ಮತ್ತು ಅದರೊಳಗೆ ಇದ್ದ ಅಸಹನೆಯನ್ನು ಪತ್ತೆ ಹಚ್ಚಿದ ಅರುಂಧತಿ, "ಸಾರಿ ನಂಗೆ ನಿಮ್ಮ ಬಗ್ಗೆ ಏನೂ ಅನುಮಾನವಿಲ್ಲ" ಎನ್ನುತ್ತ ಆಚೀಚೆ ಯಾರಾದರೂ ಇದ್ದಾರೆಯೇ ಎಂದು ನೋಡಿ, ಯಾರೂ ಇಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಂಡು, "ಪ್ಲೀಸ್ ಆ ಸೀಮೆನ್ ಬದಲು ನಂಗೆ ಬೇರೆ ಯಾರದ್ದಾದರೂ ಇನ್ಸರ್ಟ್ ಮಾಡಕ್ಕಾಗತ್ತಾ" ಎನ್ನುತ್ತ ಆಕೆಯ ಕೈ ಹಿಡಿದುಕೊಂಡಳು. ಗಾಬರಿಯಾದ ಡಾಕ್ಟರ್ ಸಾವರಿಸಿಕೊಳ್ಳುವ ಮೊದಲೇ ಪಕ್ಕದ ರೂಮಿನಿಂದ ಮಗು ಅಳುವ ಸದ್ದು ಮೆಲ್ಲಗೆ ತೇಲಿ ಬರತೊಡಗಿತು...

## ದೀಪ್ತಿ ಭದ್ರಾವತಿ

ಪ್ರಸ್ತುತ ಭದ್ರಾವತಿಯಲ್ಲಿ ನೆಲೆಸಿರುವ ದೀಪ್ತಿ 'ಆ ಬದಿಯ ಹೂವು' ಕಥಾ ಸಂಕಲನ ಹಾಗೂ 'ಕಾಗದದ ಕುದುರೆ', 'ಗ್ರೀನ್ ರೂಮಿನಲ್ಲಿ' ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ನಾಟಕ ಅಭಿನಯ, ಯಕ್ಷಗಾನ, ತಾಳಮದ್ದಲೆ ಅವರ ಆಸಕ್ತಿಯ ಕ್ಷೇತ್ರಗಳು.